# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 137 ಡಿಟಿಇ 2020 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 18.08.2021

## ಅಧಿಸೂಚನೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ 14)ರ 8ನೇ ಪ್ರಕರಣವನ್ನು ಓದಿಕೊಂಡು, 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಿರುವಂತೆ, ಕರ್ನಾಟಕ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು, 2020 ರ ಕರಡನ್ನು, ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020, ದಿನಾಂಕ: 17.11.2020 ರಲ್ಲಿ, ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ-IV-ಎ, ಸಂಖ್ಯೆ.552 ದಿನಾಂಕ: 17.11.2020 ರಲ್ಲಿ ಪ್ರಕಟಿಸಲಾಗಿದ್ದು, ಅಧಿಕೃತ ರಾಜ್ಯಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ.

ಮತ್ತು, ಸದರಿ ರಾಜ್ಯಪತ್ರವನ್ನು 17.11.2020 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು ಸದರಿ ಕರಡಿಗೆ ಸಂಬಂಧಿಸಿದಂತೆ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿರುವುದರಿಂದ.

ಆದ್ದರಿಂದ, ಪ್ರಸ್ತುತ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ14) ರ 8ನೇ ಪ್ರಕರಣವನ್ನು ಓದಿಕೊಂಡು, 3ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

# ನಿಯಮಗಳು

1. **ಶೀರ್ಷಿಕೆ, ಅನ್ವಯ ಮತ್ತು ಪ್ರಾರಂಭ**.-(1)ಈ ನಿಯಮಗಳನ್ನು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳ ಉಪಬಂಧಗಳು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಗೆ ಅನ್ವಯವಾಗತಕ್ಕದ್ದು.

(3) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು**- (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "**ವಾಸ್ತವಿಕ ಕಾರ್ಯನಿರ್ವಹಣೆ**" ಎಂದರೆ, ಬೋಧಕ ಸಿಬ್ಬಂದಿಯು ದೈನಂದಿನ ಹಾಜರಾತಿಯನ್ನು ದಾಖಲಿಸುವ ಸ್ಥಳದಲ್ಲಿನ ಆತನ/ಆಕೆಯ ಕಾರ್ಯನಿರ್ವಹಣೆ;

(ಬಿ) "**ನೇಮಕಾತಿ**" ಎಂದರೆ, ನೇರ ನೇಮಕಾತಿ ಮೂಲಕ, ವಿಲೀನದ ಮೂಲಕ ಅಥವಾ ಮುಂಬಡ್ತಿ ಮೂಲಕ ಆಗುವ ನೇಮಕಾತಿ;

(ಸಿ) "**ನೇಮಕಾತಿ ಪ್ರಾಧಿಕಾರ**" ಎಂದರೆ, ಕರ್ನಾಟಕ ಶಿಕ್ಷಣ ಇಲಾಖೆ ಸೇವೆ (ತಾಂತ್ರಿಕ ಶಿಕ್ಷಣ ಇಲಾಖೆ) ಯಲ್ಲಿ ಯಾರೇ ಬೋಧಕ ಸಿಬ್ಬಂದಿಯನ್ನು ನೇಮಕಾತಿ ಮಾಡುವ ಸಕ್ಷಮ ಪ್ರಾಧಿಕಾರ;

(ಡಿ) "**ಸಕ್ಷಮ ಪ್ರಾಧಿಕಾರ**" ಎಂದರೆ, ಈ ನಿಯಮಗಳ ಮೇರೆಗೆ ವರ್ಗಾವಣೆ ಮಾಡಲು ಸಕ್ಷಮವಾಗಿರುವಂಥ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣದ ಆಯುಕ್ತರು;

(ಇ) "**ಕೌನ್ಸಲಿಂಗ್**" ಎಂದರೆ, ಈ ನಿಯಮಗಳ ಅನುಸಾರವಾಗಿ ನೇಮಕಾತಿಅಥವಾ ವರ್ಗಾವಣೆಗಾಗಿ ಪರಿಗಣಿಸಲ್ಪಟ್ಟ ವ್ಯಕ್ತಿಗೆ ಲಭ್ಯವಿರುವ ಸ್ಥಳ ಅಥವಾ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ನೀಡುವ ಗಣಕೀಕೃತ ಕೌನ್ಸಲಿಂಗ್ ಪ್ರಕ್ರಿಯೆ;

(ಎಫ್) "**ಸರ್ಕಾರ**" ಎಂದರೆ, ಕರ್ನಾಟಕ ಸರ್ಕಾರ;

(ಜಿ) "**ಸರ್ಕಾರಿ ಕಾಲೇಜು**" ಎಂದರೆ, ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂಥ ಸರ್ಕಾರಿ ಇಂಜಿನಿಯರಿಂಗ್

ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು ಮತ್ತು ಎಲ್ಲ ಇತರೆ ಸರ್ಕಾರಿ ಕಾಲೇಜುಗಳನ್ನು ಒಳಗೊಂಡಂತೆ ರಾಜ್ಯ ಸರ್ಕಾರಕ್ಕೆ ಸೇರಿದ ಎಲ್ಲ ಕಾಲೇಜುಗಳು;

(ಹೆಚ್)"**ಧಾರಣಾಧಿಕಾರ**" ಎಂದರೆ, ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳು, 1958 ರಲ್ಲಿ ಪರಿಭಾಷಿಸಿರುವಂಥದ್ದೇ ಅರ್ಥವನ್ನು ಹೊಂದಿರುವ ಧಾರಣಾಧಿಕಾರ;

(ಐ) "**ನಿರ್ದಿಷ್ಟ ಮಾನದಂಡದ ಅಂಗವಿಕಲತೆಯುಳ್ಳ ವ್ಯಕ್ತಿ**" ಎಂದರೆ, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (2016 ರ ಕೇಂದ್ರ ಅಧಿನಿಯಮ 49) ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಪರಿಭಾಷಿಸಿದಂಥ ನಿರ್ದಿಷ್ಟ ಮಾನದಂಡದ ಅಂಗವಿಕಲತೆಯುಳ್ಳ ವ್ಯಕ್ತಿ;

(ಜೆ) "**ಪ್ರಪತ್ರ**" ಎಂದರೆ, ಸಕ್ಷಮ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ನಮೂನೆ;

(ಕೆ) "**ನಿಯತ ಸ್ಥಳ ನಿಯುಕ್ತಿ**" ಎಂದರೆ, ಬೋಧಕ ಸಿಬ್ಬಂದಿಯ ಧಾರಣಾಧಿಕಾರವಿರುವಲ್ಲಿ ಬೋಧಕ ಸಿಬ್ಬಂದಿಯನ್ನು ಸ್ಥಳ ನಿಯುಕ್ತಿ ಮಾಡುವುದು;

(ಎಲ್) "**ಅನುಸೂಚಿ**" ಎಂದರೆ, ಈ ನಿಯಮಗಳಿಗೆ ಸೇರಿಸಲಾದ ಅನುಸೂಚಿ;

(ಎಂ) "**ಗಂಭೀರ ಸ್ವರೂಪದ ಕಾಯಿಲೆಗಳು**" ಎಂದರೆ,

(i) ನೌಕರರ ಕಾಯಿಲೆಯ ಸಂದರ್ಭದಲ್ಲಿ ಸರ್ಕಾರವು ಅಧಿಸೂಚಿಸಿರುವಂಥ ರೋಗಗಳ ಪಟ್ಟಿಯಲ್ಲಿರುವ;

(ii) ನೌಕರರ ಪತಿ/ಪತ್ನಿ ಮತ್ತು ಮಕ್ಕಳ ಕಾಯಿಲೆಯ ಸಂದರ್ಭದಲ್ಲಿ, ಸರ್ಕಾರವು ಅಧಿಸೂಚಿಸಿರುವಂಥ ರೋಗಗಳ ಪಟ್ಟಿಯಲ್ಲಿರುವ;- ಕಾಯಿಲೆಗಳು ಎಂದರ್ಥ.

(ಎನ್) "**ಪತಿ/ಪತ್ನಿ ಪ್ರಕರಣ**" ಎಂದರೆ, ರಾಜ್ಯ ಅಥವಾ ಕೇಂದ್ರ ಸರ್ಕಾರ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳು ಅಥವಾ ಸರ್ಕಾರಿ ಸ್ವಾಮ್ಯದಲ್ಲಿರುವ ಸಾರ್ವಜನಿಕ ವಲಯದ ಉದ್ಯಮಗಳು ಅಥವಾ ಸಂಸ್ಥೆ ಅಥವಾ ನಿಗಮ ಅಥವಾ ಮಂಡಳಿಯ ನೌಕರರಾಗಿರುವಂಥ ಅಥವಾ ಸರ್ಕಾರಿ

ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಅಥವಾ ರಾಜ್ಯ ವಿಶ್ವವಿದ್ಯಾನಿಲಯದ ಅನುದಾನಿತ ನೌಕರರಾಗಿರುವಂಥ ಬೋಧಕ ಸಿಬ್ಬಂದಿಯ ಪತಿ/ಪತ್ನಿಯ ಪ್ರಕರಣ;

(ಒ) “**ಸಾಕಷ್ಟು ಕಾರ್ಯಭಾರ**” ಎಂದರೆ, ಸಕ್ಷಮ ಪ್ರಾಧಿಕಾರವು ಸಾಕಷ್ಟು ಎಂದು ನಿರ್ದಿಷ್ಟಪಡಿಸಿದ ಕಾರ್ಯಭಾರ;

(ಪಿ) “**ಬೋಧಕ ಸಿಬ್ಬಂದಿ**” ಎಂದರೆ, ಈ ನಿಯಮಗಳಿಗೆ ಸೇರಿಸಲಾದ ಅನುಸೂಚಿಯಲ್ಲಿ ನಮೂದಿಸಲಾದಂಥ ನೌಕರರು;

(ಕ್ಯೂ)“**ವರ್ಗಾವಣೆ**” ಎಂದರೆ, ಆತ/ಆಕೆ ನಿಯತ ಸ್ಥಳ ನಿಯುಕ್ತಿಯನ್ನು ಹೊಂದಿರುವ ಒಂದು ಕಾರ್ಯಸ್ಥಾನ ಅಥವಾಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಅಥವಾ ಸರ್ಕಾರಿ ಪಾಲಿಟೆಕ್ನಿಕ್ ಅಥವಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಂದ ಕೌನ್ಸಲಿಂಗ್ ಮುಖಾಂತರ ಮತ್ತೊಂದು ಕಾರ್ಯಸ್ಥಾನಕ್ಕೆ ಅಥವಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್‌ಗೆ ಅಥವಾ ಸರ್ಕಾರಿ ಪಾಲಿಟೆಕ್ನಿಕ್‌ಗೆ ಅಥವಾ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ ಬೋಧಕ ಸಿಬ್ಬಂದಿಯ ಸ್ಥಳ ನಿಯುಕ್ತಿ ಮಾಡುವುದು;

(ಆರ್) “**ಕಾರ್ಯಭಾರ**” ಎಂದರೆ, ಹಿಂದಿನ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳ ಸಂಖ್ಯಾಬಲದ ಆಧಾರದ ಮೇಲೆ ಹಂಚಿಕೆ ಮಾಡಿದ ವಿಷಯವಾರು ಕಾರ್ಯಭಾರ.

(ಎಸ್) “**ವಲಯ**” ಎಂದರೆ, ಬೋಧಕ ಸಿಬ್ಬಂದಿಯ ನೇಮಕಾತಿ ಅಥವಾ ವರ್ಗಾವಣೆಯ ಉದ್ದೇಶಕ್ಕಾಗಿ ವಲಯವೆಂದು ವರ್ಗೀಕರಿಸಲಾದ ನಿರ್ದಿಷ್ಟ ಪ್ರದೇಶಗಳು ಮತ್ತು ಇದರಲ್ಲಿ

(i) “ವಲಯ-ಎ”ಎಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯೊಳಗೆ ಬರುವ ಪ್ರದೇಶ;

(ii) “ವಲಯ-ಬಿ”ಎಂದರೆ, ವಲಯ-ಎ ಅಡಿಯಲ್ಲಿ ಬರುವ ಪ್ರದೇಶಗಳನ್ನು ಹೊರತುಪಡಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯೊಳಗಿನ ಎಲ್ಲ ಪ್ರದೇಶಗಳು ಮತ್ತು ಕರ್ನಾಟಕ ಪೌರ ನಿಗಮಗಳಅಧಿನಿಯಮ, 1976 (1977 ರ ಕರ್ನಾಟಕ ಅಧಿನಿಯಮ 14)ರ ಮೇರೆಗೆ ರಚಿತವಾದ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು.

(iii) “ವಲಯ-ಸಿ” ಎಂದರೆ, ವಲಯ-ಎ ಮತ್ತು ವಲಯ-ಬಿ ಅಡಿಯಲ್ಲಿ ಬರುವ ಪ್ರದೇಶವನ್ನು ಹೊರುತಪಡಿಸಿ, ಎಲ್ಲ ಜಿಲ್ಲೆಗಳ ಜಿಲ್ಲಾ ಕೇಂದ್ರ ಸ್ಥಾನಗಳು ಮತ್ತು ಕರ್ನಾಟಕ ಪೌರ ನಿಗಮಗಳಅಧಿನಿಯಮ, 1976 (1977 ರ ಕರ್ನಾಟಕ

ಅಧಿನಿಯಮ 14) ರ ಮೇರೆಗೆ ರಚಿತವಾದ ಎಲ್ಲ ನಗರಮುನ್ಸಿಪಲ್ ಕೌನ್ಸಿಲ್‌ಗಳು;

(iv) "ವಲಯ-ಡಿ" ಎಂದರೆ, ವಲಯ-ಎ, ವಲಯ-ಬಿ ಮತ್ತು ವಲಯ-ಸಿ ಅಡಿಯಲ್ಲಿ ಬರುವಂಥ ಪ್ರದೇಶಗಳನ್ನು ಹೊರುತಪಡಿಸಿ, ಎಲ್ಲ ಇತರೆ ಪ್ರದೇಶಗಳು ಒಳಗೊಳ್ಳುತ್ತವೆ.

(2) ಈ ನಿಯಮಗಳಲ್ಲಿ ಬಳಸಿದ ಆದರೆ ಪರಿಭಾಷಿಸಿಲ್ಲದ ಪದಗಳು ಮತ್ತು ಅಭಿವ್ಯಕ್ತಿಗಳು, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರಲ್ಲಿ ಅವುಗಳಿಗೆ ನೀಡಿರುವಂಥದ್ದೇ ಅರ್ಥವನ್ನು ಹೊಂದಿರತಕ್ಕದ್ದು.

3. **ಹುದ್ದೆಗಳನ್ನು ಸ್ಥಳಾಂತರಗೊಳಿಸುವುದು.**-(1) ಯಾವುದೇ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಅಥವಾ ಸರ್ಕಾರಿ ಪಾಲಿಟೆಕ್ನಿಕ್ ಅಥವಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ, ಯಾವುದೇ ವಿಷಯದಲ್ಲಿ ಬೋಧಕ ಸಿಬ್ಬಂದಿಗೆ ಸಾಕಷ್ಟು ಕಾರ್ಯಭಾರ ಲಭ್ಯವಿಲ್ಲದಿದ್ದರೆ, ಸಕ್ಷಮ ಪ್ರಾಧಿಕಾರವು ಹೆಚ್ಚುವರಿಯೆಂದು ನಿರ್ಧರಿಸಬಹುದಾದಷ್ಟು ಸಂಖ್ಯೆಯ ಹುದ್ದೆಗಳನ್ನು ಹುದ್ದೆಯ ಸ್ಥಳಾಂತರಕ್ಕೆ, ಸಾಕಷ್ಟು ಕಾರ್ಯಭಾರವಿರುವಂಥ ಅದೇ ವಲಯದೊಳಗಿನ ಯಾವುದೇ ಇತರೆ ಕಾಲೇಜಿಗೆ ಸ್ಥಳಾಂತರಿಸಬಹುದು.

ಪರಂತು, ಅದೇ ವಲಯದಲ್ಲಿ, ಆ ವಿಷಯದಲ್ಲಿ ಸಾಕಷ್ಟು ಕಾರ್ಯಭಾರ ಇರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಅಥವಾ ಸರ್ಕಾರಿ ಪಾಲಿಟೆಕ್ನಿಕ್ ಅಥವಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು ಲಭ್ಯವಿಲ್ಲದಿದ್ದರೆ, ಆ ವಿಷಯದಲ್ಲಿನ ಅಷ್ಟೂ ಸಂಖ್ಯೆಯ ಹುದ್ದೆಗಳನ್ನು, ಸಕ್ಷಮ ಪ್ರಾಧಿಕಾರವು ಸಾಧ್ಯವಾದಷ್ಟು ಮಟ್ಟಿಗೆ, ನೆರೆಹೊರೆಯ ಅಥವಾ ಸಮೀಪದ ಯಾವುದೇ ಇತರೆ ವಲಯದಲ್ಲಿ ಸಾಕಷ್ಟು ಕಾರ್ಯಭಾರ ಹೊಂದಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಅಥವಾ ಸರ್ಕಾರಿ ಪಾಲಿಟೆಕ್ನಿಕ್ ಅಥವಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ ಸ್ಥಳಾಂತರಿಸತಕ್ಕದ್ದು.

ಮತ್ತು ಪರಂತು, ಸಿಬ್ಬಂದಿಯನ್ನು, ಹುದ್ದೆಯೊಂದಿಗೆ ಸ್ಥಳಾಂತರಿಸಿದ್ದರೆ, ಸ್ಥಳಾಂತರಿಸುವುದಕ್ಕಿಂತ ಮೊದಲು ಈ ಹಿಂದಿನ ನಿಯತ ಸ್ಥಳ ನಿಯುಕ್ತಿಯ ಕಾರ್ಯಸ್ಥಳ ಮತ್ತು ವಲಯವನ್ನು, 4ನೇ ನಿಯಮದ ಮೇರೆಗೆ ವರ್ಗಾವಣೆಗಾಗಿ ಕನಿಷ್ಠ ಸೇವಾವಧಿಯನ್ನು

ನಿರ್ಧರಿಸಲು ಮತ್ತು 5ನೇ ನಿಯಮದ ಮೇರೆಗೆ ಆದ್ಯತಾ ಪಟ್ಟಿಯನ್ನು ಸಿದ್ಧಪಡಿಸುವುದಕ್ಕಾಗಿ ಪರಿಗಣಿಸತಕ್ಕದ್ದು.

(2) (1) ನೇ ಉಪ-ನಿಯಮದ ಪ್ರಕಾರ ಹುದ್ದೆಗಳ ಸ್ಥಳಾಂತರಿಸುವ ಪ್ರಕ್ರಿಯೆಯನ್ನು, 4, 5, 6 ಮತ್ತು 7ನೇ ನಿಯಮದ ಅನುಸಾರವಾಗಿ ವರ್ಗಾವಣೆ ಪ್ರಕ್ರಿಯೆ ಕೈಗೊಳ್ಳುವುದಕ್ಕಿಂತ ಮುಂಚೆ ಹಾಗೂ 8ನೇ ನಿಯಮದಲ್ಲಿ ನಿಯಮಿಸಿದ ವರ್ಗಾವಣೆ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು.

4. **ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಅಥವಾ ಕೋರಿಕೆಯ ಮೇಲೆ ಕೌನ್ಸಲಿಂಗ್ ಮೂಲಕ ಬೋಧಕ ಸಿಬ್ಬಂದಿಯ ವರ್ಗಾವಣೆ**:-

(1) ನಿಯತವಾಗಿ ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯನ್ನು, (3)ನೇ ಉಪ-ನಿಯಮದಲ್ಲಿ ವಿಧಿಸಲಾದ ನಿರ್ಬಂಧಗಳಿಗೊಳಪಟ್ಟು ಕೌನ್ಸಲಿಂಗ್ ಪ್ರಕ್ರಿಯೆಯ ಮುಖಾಂತರ ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕಡ್ಡಾಯವಾಗಿ ವರ್ಗಾವಣೆ ಮಾಡತಕ್ಕದ್ದು. ವರ್ಗಾವಣೆ ಉದ್ದೇಶಕ್ಕಾಗಿ ಪ್ರಸ್ತುತನಿಯತವಾಗಿ ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಪೂರ್ಣಗೊಳಿಸಬೇಕಾದ ಕನಿಷ್ಠ ಸೇವಾವಧಿಯು ನಾಲ್ಕು ವರ್ಷಗಳಾಗಿರತಕ್ಕದ್ದು.

(2). (3)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ 2, 3, 4 ಮತ್ತು 5ನೇ ಪ್ರವರ್ಗಗಳಿಗೆ ಸೇರಿದ ಬೋಧಕ ಸಿಬ್ಬಂದಿಯು, (3)ನೇ ಉಪ-ನಿಯಮದಲ್ಲಿ ವಿಧಿಸಲಾದ ನಿರ್ಬಂಧನೆಗಳಿಗೊಳಪಟ್ಟು, (1)ನೇ ಉಪ-ನಿಯಮದಲ್ಲಿ ಗೊತ್ತುಪಡಿಸಲಾದ ಪ್ರಸ್ತುತ ನಿಯತವಾಗಿ ಸ್ಥಳ ನಿಯುಕ್ತಿಗೊಳಿಸಿರುವ ಸ್ಥಳದಲ್ಲಿ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿದ ತರುವಾಯ, ಕೌನ್ಸಲಿಂಗ್ ಮುಖಾಂತರ ವರ್ಗಾವಣೆಗೆ ಕೋರಬಹುದು. ಈ ಉದ್ದೇಶಕ್ಕಾಗಿ, ಬೋಧಕ ಸಿಬ್ಬಂದಿಯು, (3) ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ 2, 3, 4 ಮತ್ತು 5ನೇ ಪ್ರವರ್ಗಗಳಲ್ಲಿ ಯಾವುದೇ ಒಂದು ಪ್ರವರ್ಗದಿಂದ ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು, ಆದರೆ ಒಂದಕ್ಕಿಂತ ಹೆಚ್ಚಿನ ಪ್ರವರ್ಗದಿಂದಲ್ಲ.

(3). ವರ್ಗಾವಣೆಯ ಮೇಲೆ ನಿರ್ಬಂಧ.- ಕೌನ್ಸಲಿಂಗ್ ಮುಖಾಂತರ ಮಾಡುವ ವರ್ಗಾವಣೆಗಳ ಒಟ್ಟು ಸಂಖ್ಯೆಯು, ಮಂಜೂರಾದ ಬೋಧಕ ಸಿಬ್ಬಂದಿಯ ಸಂಖ್ಯಾಬಲದ ಶೇಕಡಾ ಹದಿನೈದರಷ್ಟನ್ನು ಮೀರತಕ್ಕದ್ದಲ್ಲ. ವರ್ಗಾವಣೆಗಳ ಒಟ್ಟು ಸಂಖ್ಯೆಯ ಶೇಕಡಾ

ಹದಿನೈದರ ಪೈಕಿ, ಶೇಕಡಾ ಒಂಬತ್ತರಷ್ಟನ್ನು, ಕೌನ್ಸಿಲಿಂಗ್ ಮುಖಾಂತರ ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕಡ್ಡಾಯ ವರ್ಗಾವಣೆಗಾಗಿ ಮೀಸಲಿರಿಸತಕ್ಕದ್ದು ಮತ್ತು ಉಳಿದಿರುವ ಶೇಕಡಾ ಆರರಷ್ಟನ್ನು, (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ಕನಿಷ್ಠ ಸೇವಾವಧಿಯು ಪೂರ್ಣಗೊಂಡ ಮೇಲೆ, ಈ ಕೆಳಕಂಡ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಲಾದಂತೆ ಕೋರಿಕೆಯ ಮೇಲಿನ ವರ್ಗಾವಣೆಗಳಿಗಾಗಿ ಮೀಸಲಿರಿಸತಕ್ಕದ್ದು:

**ಕೋಷ್ಟಕ**

| **ಕ್ರಮ. ಸಂಖ್ಯೆ** | **ಪ್ರವರ್ಗ** | **ವರ್ಗಾವಣೆಗಳ ಶೇಕಡವಾರು** |
|---|---|---|
| 1. | ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕಡ್ಡಾಯ ವರ್ಗಾವಣೆಗಳ ಪ್ರಕರಣಗಳು | 9% |
| 2. | ಪತಿ/ಪತ್ನಿ ಪ್ರಕರಣಗಳು | 3% |
| 3. | 12 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊಂದಿರುವ ವಿಧವೆ ಅಥವಾ ಒಂಟಿಪಾಲಕ ಅಥವಾ ಮರುವಿವಾಹವಾಗದಿರುವ ವಿಚ್ಛೇದಿತ ಮಹಿಳೆಯರು ಅಥವಾ ಭಾರತೀಯ ಸಶಸ್ತ್ರ ಪಡೆಗಳು ಅಥವಾ ಅರೆಸೇನಾ ಪಡೆಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವಾಗ ಉಂಟಾದ ನಿರ್ದಿಷ್ಟ ಮಾನದಂಡದ ಅಂಗವಿಕಲತೆಯಿಂದ ಬಳಲುತ್ತಿರುವ ಸಂಪೂರ್ಣ (ಙುಥುಙಿಚಿಟಟಥಿ) ಅವಲಂಬಿತ ಪತಿ/ಪತ್ನಿ ಮತ್ತು ಮಕ್ಕಳನ್ನು ಹೊಂದಿರುವ ಬೋಧಕ ಸಿಬ್ಬಂದಿಯ ಪ್ರಕರಣಗಳು. | 1% |
| 4. | ನಿರ್ದಿಷ್ಟ ಮಾನದಂಡದ ಅಂಗವಿಕಲತೆಯುಳ್ಳ ವ್ಯಕ್ತಿಯ ಪ್ರಕರಣಗಳು | 1% |
| 5. | ಗಂಭೀರ ಸ್ವರೂಪದ ಕಾಯಿಲೆಗಳ ಪ್ರಕರಣಗಳು | 1% |
| | **ಒಟ್ಟು** | 15% |

(4). **ವರ್ಗಾವಣೆಗಳಿಗೆ ವಿನಾಯಿತಿಗಳು**.-(ಎ) (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ಕನಿಷ್ಠ ಸೇವಾವಧಿಯನ್ನು ಸಂಬಂಧಪಟ್ಟ ಬೋಧಕ ಸಿಬ್ಬಂದಿಯು ಹಾಗೆ ಅಪೇಕ್ಷಿಸಿದರೆ ಒಂದು

ವರ್ಷಕ್ಕೆ ಕಡಿತಗೊಳಿಸತಕ್ಕದ್ದು ಮತ್ತು ಒಟ್ಟು ಸೇವಾವಧಿಯಲ್ಲಿ ಒಮ್ಮೆ ಮಾತ್ರ ಈ ಪ್ರಯೋಜನವನ್ನು ಪಡೆದುಕೊಳ್ಳತಕ್ಕದ್ದು:

ಪರಂತು, ಬೋಧಕ ಸಿಬ್ಬಂದಿಯ ಪತಿ/ಪತ್ನಿ ಅಥವಾ ಮಕ್ಕಳು, ನಿರ್ದಿಷ್ಟ ಮಾನದಂಡದ ಅಂಗವಿಕಲತೆಯಿಂದ ಅಥವಾ ಗಂಭೀರ ಸ್ವರೂಪದ ಕಾಯಿಲೆಯಿಂದ ಬಳಲುತ್ತಿದ್ದು, ಬೋಧಕ ಸಿಬ್ಬಂದಿಯು ಕೆಲಸ ಮಾಡುವ ಸ್ಥಳದಲ್ಲಿ ಅಂಥ ವೈದ್ಯಕೀಯ ಚಿಕಿತ್ಸೆ ಲಭ್ಯವಿಲ್ಲದಿದ್ದರೆ ಮತ್ತು ಈ ನಿಯಮಗಳ ಉಪಬಂಧಗಳಿಗೊಳಪಟ್ಟು, ಅಂಥ ಚಿಕಿತ್ಸೆ ಲಭ್ಯವಿರುವಂಥ ಸ್ಥಳಕ್ಕೆ ಬೋಧಕ ಸಿಬ್ಬಂದಿಯನ್ನು ವರ್ಗಾವಣೆ ಮಾಡುವುದು ಅವಶ್ಯಕವಾಗಿರುತ್ತದೆ:

ಮತ್ತೂ ಪರಂತು, ಸಂಬಂಧಪಟ್ಟ ಬೋಧಕ ಸಿಬ್ಬಂದಿಯು, ಕಾಯಿಲೆಯ ಸ್ವರೂಪವನ್ನು ನಿರ್ದಿಷ್ಟ ಪಡಿಸಿ, ಆತನು ಕೆಲಸ ಮಾಡುವ ಸ್ಥಳದಲ್ಲಿ ಅಗತ್ಯ ಚಿಕಿತ್ಸೆಯು ಲಭ್ಯವಿರುವುದಿಲ್ಲ ಎಂಬ ಸಂಗತಿಯನ್ನು ತಿಳಿಸಿ ಮತ್ತು ಅಗತ್ಯ ಚಿಕಿತ್ಸೆಯು ಲಭ್ಯವಿರುವ ಸ್ಥಳವನ್ನು ನಿರ್ದಿಷ್ಟಪಡಿಸಿ, ಅಗತ್ಯವಿರುವ ವೈದ್ಯಕೀಯ ಚಿಕಿತ್ಸೆಯನ್ನು ಆತ ಕೊಡಿಸಲು ಅಂಥ ಒಂದು ಸ್ಥಳಕ್ಕೆ ಆತನನ್ನು ವರ್ಗಾವಣೆ ಮಾಡುವುದು ಅವಶ್ಯಕವಾಗಿದೆ ಎಂದು ಪ್ರಮಾಣೀಕರಿಸಿ ಜಿಲ್ಲಾ ವೈದ್ಯಕೀಯ ಮಂಡಳಿಯು ಪ್ರಮಾಣಪತ್ರ ನೀಡಿದ ಹೊರತು, ಈ ಖಂಡದ ಮೇರೆಗೆ ಯಾವುದೇ ವರ್ಗಾವಣೆಯನ್ನು ಪರಿಗಣಿಸತಕ್ಕದ್ದಲ್ಲ.

(ಬಿ). (1) ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯು, ವರ್ಗಾವಣೆಯಿಂದ ಈ ಕೆಳಕಂಡ ವಿನಾಯಿತಿಗಳಿಗೆ ಒಳಪಟ್ಟಿರತಕ್ಕದ್ದು ಹಾಗೂ ಒಟ್ಟು ಸೇವಾವಧಿಯಲ್ಲಿ ಒಮ್ಮೆ ಮಾತ್ರ ಈ ಪ್ರಯೋಜನವನ್ನು ಈ ಕೆಳಕಂಡ ಸಂದರ್ಭಗಳಲ್ಲಿ ಪಡೆಯತಕ್ಕದ್ದು, ಎಂದರೆ:-

(i) ಬೋಧಕ ಸಿಬ್ಬಂದಿ ಅಪೇಕ್ಷಿಸಿದಲ್ಲಿ, ವಯೋನಿವೃತ್ತಿಗೆ ಎರಡು ವರ್ಷಗಳಿಗಿಂತ ಕಡಿಮೆ ಸೇವಾವಧಿಯಿರುವ ಬೋಧಕ ಸಿಬ್ಬಂದಿಯನ್ನು ವರ್ಗಾವಣೆ ಮಾಡತಕ್ಕದ್ದಲ್ಲ.

(ii) ನಿರ್ದಿಷ್ಟ ಅವಧಿಗೆ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು (ಎಐಸಿಟಿಇ), ತಾಂತ್ರಿಕ ಶಿಕ್ಷಣದ ಗುಣಮಟ್ಟ ಸುಧಾರಣೆ ಕಾರ್ಯಕ್ರಮ (ಟಿಇಕ್ಯೂಯುಐಪಿ) ಮತ್ತು ಇತರೆ ಯಾವುದೇ ಸರ್ಕಾರಿ ಸಂಸ್ಥೆ ಅಥವಾ ಯಾವುದೇ ಶಾಸನಬದ್ಧ ಏಜೆನ್ಸಿಯಿಂದ ಮಂಜೂರಾದ ಪ್ರಮುಖ ಯೋಜನೆಯನ್ನು ಕೈಗೊಂಡಿರುವ ಬೋಧಕ ಸಿಬ್ಬಂದಿಯನ್ನು, (1) ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ಕನಿಷ್ಠ ಸೇವಾವಧಿಯನ್ನು

ಪೂರ್ಣಗೊಳಿಸಿದ ದಿನಾಂಕದಿಂದ, ಎರಡು ವರ್ಷಗಳ ಅವಧಿಯವರೆಗೆ ಅಥವಾ ಯೋಜನೆಯು ಪೂರ್ಣಗೊಳ್ಳುವವರೆಗೆ ವರ್ಗಾವಣೆ ಮಾಡತಕ್ಕದ್ದಲ್ಲ. ಸದರಿ ವಿನಾಯಿತಿಯನ್ನು ಕ್ಲೇಮು ಮಾಡಿಕೊಳ್ಳುವುದಕ್ಕಾಗಿ, ಸಂಬಂಧಪಟ್ಟ ಬೋಧಕ ಸಿಬ್ಬಂದಿಯು, ಸಕ್ಷಮ ಪ್ರಾಧಿಕಾರವು ನಿಯಮಿಸಿ ನಿರ್ದಿಷ್ಟಪಡಿಸಿದ ಪ್ರಪತ್ರದಲ್ಲಿ ಕೈಗೊಂಡ ಪ್ರಮುಖ ಯೋಜನೆಯ ವಿವರಗಳನ್ನು ಒದಗಿಸತಕ್ಕದ್ದು.

(iii) ಸಂಶೋಧನಾ ಕೇಂದ್ರಗಳಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ, ಸಂಶೋಧನಾ ಮಾರ್ಗದರ್ಶಕರಾಗಿದ್ದು, ತಮ್ಮ ಮಾರ್ಗದರ್ಶನದಲ್ಲಿ ಪಿ.ಹೆಚ್.ಡಿ ಅಥವಾ ಎಂ.ಫಿಲ್ ಸಂಶೋಧನಾ ಕಾರ್ಯವನ್ನು ಮಾಡುತ್ತಿರುವ ವಿದ್ಯಾರ್ಥಿಗಳನ್ನು ಹೊಂದಿರುವ ಬೋಧಕ ಸಿಬ್ಬಂದಿಯನ್ನು, (1)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದಂತೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿದ ದಿನಾಂಕದಿಂದ ಎರಡು ವರ್ಷಗಳವರೆಗೆ ಅಥವಾ ಪಿಹೆಚ್.ಡಿ ಅಥವಾ ಎಂ.ಫಿಲ್ ಅನ್ನು ಪೂರ್ಣಗೊಳಿಸುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವರ್ಗಾವಣೆ ಮಾಡತಕ್ಕದ್ದಲ್ಲ.

(iv) ಸರ್ಕಾರಿ ಇಂಜಿನಿಯರಿಂಗ್ ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಎನ್‌ಸಿಸಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಯನ್ನು, (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿದ ದಿನಾಂಕದಿಂದ ಎರಡು ವರ್ಷಗಳವರೆಗೆ ವರ್ಗಾವಣೆ ಮಾಡತಕ್ಕದ್ದಲ್ಲ.

(v) ಕರ್ನಾಟಕ ಸರ್ಕಾರಿ ಕಾಲೇಜು ಶಿಕ್ಷಕರ ಸಂಘದ ಕೇಂದ್ರ ಪದಾಧಿಕಾರಿಯಾಗಿರುವ ಮತ್ತು (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯನ್ನು ಸಂಬಂಧಿಸಿದ ಪದಾಧಿಕಾರಿಯ ಅವಧಿ ಮುಗಿಯುವವರೆಗೆ ವರ್ಗಾವಣೆ ಮಾಡತಕ್ಕದ್ದಲ್ಲ.

(5). ಕೌನ್ಸಲಿಂಗ್ ನಡೆಸುವ ಮೂಲಕ ವರ್ಗಾವಣೆಯನ್ನು, ಈ ಕೆಳಕಂಡ ಕ್ರಮದಲ್ಲಿ ಮಾಡತಕ್ಕದ್ದು:

(ಎ) ಜೇಷ್ಠತೆಯ ಇಳಿಕೆ ಕ್ರಮದಲ್ಲಿ, 5ನೇ ನಿಯಮದ ಮೇರೆಗೆ ಸಿದ್ಧಪಡಿಸಲಾದ ಆದ್ಯತಾ ಪಟ್ಟಿಯ ಅನುಸಾರ, ವಲಯ-ಬಿ

ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯನ್ನು ಪ್ರಸ್ತುತ ಸ್ಥಳ, ನಿಯುಕ್ತಿಗೊಳಿಸಿದ ಸ್ಥಳವನ್ನು ಹೊರತುಪಡಿಸಿ, ಯಾವುದೇ ವಲಯದಲ್ಲಿ ಪ್ರದರ್ಶಿಸಲಾದ ಯಾವುದೇ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಅನುಮತಿಸತಕ್ಕದ್ದು.

(ಬಿ) ಜೇಷ್ಠತೆಯ ಇಳಿಕೆ ಕ್ರಮದಲ್ಲಿ, 5ನೇ ನಿಯಮದ ಮೇರೆಗೆ ಸಿದ್ಧಪಡಿಸಲಾದ ಆದ್ಯತಾ ಪಟ್ಟಿಯ ಅನುಸಾರ, ವಲಯ-ಸಿ ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯನ್ನು, ಪ್ರಸ್ತುತ ಸ್ಥಳನಿಯುಕ್ತಿಗೊಳಿಸಿದ ಸ್ಥಳವನ್ನು ಹೊರತುಪಡಿಸಿ, ಯಾವುದೇ ವಲಯದಲ್ಲಿ ಪ್ರದರ್ಶಿಸಲಾದ ಯಾವುದೇ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಅನುಮತಿಸತಕ್ಕದ್ದು.

(ಸಿ) ಜೇಷ್ಠತೆಯ ಇಳಿಕೆ ಕ್ರಮದಲ್ಲಿ, 5ನೇ ನಿಯಮದ ಮೇರೆಗೆ ಸಿದ್ಧಪಡಿಸಲಾದ ಆದ್ಯತಾ ಪಟ್ಟಿಯ ಅನುಸಾರ, ವಲಯ-ಡಿ ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯನ್ನು, ಪ್ರಸ್ತುತ ಸ್ಥಳ ನಿಯುಕ್ತಿಗೊಳಿಸಿದ ಸ್ಥಳವನ್ನು ಹೊರುತುಪಡಿಸಿ, ಯಾವುದೇ ವಲಯದಲ್ಲಿ ಪ್ರದರ್ಶಿಸಲಾದ ಯಾವುದೇ ಕಾಲೇಜನ್ನು ಆಯ್ಕೆಮಾಡಿಕೊಳ್ಳಲು ಅನುಮತಿಸತಕ್ಕದ್ದು.

(ಡಿ) ಜೇಷ್ಠತೆಯ ಇಳಿಕೆ ಕ್ರಮದಲ್ಲಿ, 5ನೇ ನಿಯಮದ ಮೇರೆಗೆ ಸಿದ್ಧಪಡಿಸಲಾದ ಆದ್ಯತಾ ಪಟ್ಟಿಯ ಅನುಸಾರ, ವಲಯ-ಎ ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯನ್ನು ಪ್ರಸ್ತುತ ಸ್ಥಳ ನಿಯುಕ್ತಿಗೊಳಿಸಿದ ಸ್ಥಳವನ್ನು ಹೊರತುಪಡಿಸಿ, ಯಾವುದೇ ವಲಯದಲ್ಲಿ ಪ್ರದರ್ಶಿಸಲಾದ ಯಾವುದೇ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಅನುಮತಿಸತಕ್ಕದ್ದು.

5. **ಆದ್ಯತಾಪಟ್ಟಿಗಳನ್ನು ಸಿದ್ಧಪಡಿಸುವುದು.**- (ಎ) 4ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯ ಆದ್ಯತಾ ಪಟ್ಟಿಗಳನ್ನು ಮತ್ತು 4ನೇ ನಿಯಮದ (2)ನೇ ಉಪ-ನಿಯಮದ ಮೇರೆಗೆ ವರ್ಗಾವಣೆಗಾಗಿ ಕೋರಿರುವ ಬೋಧಕ ಸಿಬ್ಬಂದಿಯ ಮತ್ತು ಪ್ರಸ್ತುತ ನಿಯತವಾಗಿ ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ 4ನೇ ನಿಯಮದ (4)ನೇ ಉಪ-ನಿಯಮದ(ಎ) ಖಂಡದ ಅಡಿಯಲ್ಲಿ ಕನಿಷ್ಠ ಸೇವೆಯ ವಿನಾಯಿತಿ (ಕಡಿತ)ಯ ಪ್ರಯೋಜನವನ್ನು ಪಡೆದುಕೊಳ್ಳಲು ಅಪೇಕ್ಷಿಸುವಂಥ ಬೋಧಕ ಸಿಬ್ಬಂದಿಯ ಒಂದು ಪ್ರತ್ಯೇಕ ಪಟ್ಟಿಯನ್ನು ಪ್ರಸ್ತುತ ನಿಯತವಾಗಿ ಸ್ಥಳ ನಿಯುಕ್ತಿಗೊಳಿಸಿದ

ವಲಯದಲ್ಲಿನ ಸಂಪೂರ್ಣ ಸೇವೆಯಲ್ಲಿ ವಾಸ್ತವಿಕವಾಗಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ವರ್ಷಗಳ ಆಧಾರದ ಮೇಲೆ, ಅನುಸೂಚಿಯಲ್ಲಿ ನೀಡಲಾದಂತೆ ವಲಯವಾರು ಮತ್ತು ಪ್ರವರ್ಗವಾರು, ಸಕ್ಷಮ ಪ್ರಾಧಿಕಾರದಿಂದ ಅರ್ಜಿಯನ್ನು ಆಹ್ವಾನಿಸಿದ ತರುವಾಯ ಸಿದ್ಧಪಡಿಸತಕ್ಕದ್ದು.

(ಬಿ) ಪ್ರತಿಯೊಂದು ವಲಯದೊಳಗೆ, ಆದ್ಯತಾ ಪಟ್ಟಿಗಳನ್ನು 4ನೇ ನಿಯಮದ (3)ನೇ ಉಪ-ನಿಯಮದಲ್ಲಿ ನೀಡಿದ ಪ್ರತಿಯೊಂದು ಪ್ರವರ್ಗಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಸಿದ್ಧಪಡಿಸತಕ್ಕದ್ದು ಮತ್ತು ಪ್ರತಿಯೊಂದು ವಲಯದಿಂದ ವರ್ಗಾವಣೆಯನ್ನು ಈ ಕೆಳಕಂಡ ಆದ್ಯತಾ ಕ್ರಮದಲ್ಲಿ ಮಾಡತಕ್ಕದ್ದು.

(i) ನಿರ್ದಿಷ್ಟ ಮಾನದಂಡದ ಅಂಗವಿಕಲತೆಯುಳ್ಳ ವ್ಯಕ್ತಿಯ

(ii) ಗಂಭೀರ ಸ್ವರೂಪದ ಕಾಯಿಲೆಗಳ ಪ್ರಕರಣಗಳು;

(iii) 12 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊಂದಿರುವ ವಿಧವೆ ಅಥವಾ ಒಂಟಿಪಾಲಕ ಅಥವಾ ಮರು-ವಿವಾಹವಾಗದಿರುವ ವಿಚ್ಛೇದಿತ ಮಹಿಳೆಯರು ಅಥವಾ ಭಾರತೀಯ ಸಶಸ್ತ್ರ ಪಡೆಗಳಲ್ಲಿ ಅಥವಾ ಅರೆಸೇನಾ ಪಡೆಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವಾಗ ಉಂಟಾದ ನಿರ್ದಿಷ್ಟ ಮಾನದಂಡದ ಅಂಗವಿಕಲತೆಯಿಂದ ಬಳಲುತ್ತಿರುವ ಸಂಪೂರ್ಣ (Physically) ಅವಲಂಬಿತ ಪತಿ/ಪತ್ನಿ ಮತ್ತು ಮಕ್ಕಳನ್ನು ಹೊಂದಿರುವ ಬೋಧಕ ಸಿಬ್ಬಂದಿಯ ಪ್ರಕರಣಗಳು.

(iv) ಪತಿ/ಪತ್ನಿ ಪ್ರಕರಣಗಳು;

(v) ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕಡ್ಡಾಯ

(ಸಿ) ಸೇವೆ ಸಲ್ಲಿಸಿದ ವರ್ಷಗಳ ಸಂಖ್ಯೆಯು ಸಮಾನವಾಗಿದ್ದಲ್ಲಿ, ಈ ಹಿಂದೆ ಕಾರ್ಯನಿರ್ವಹಣೆಯಲ್ಲಿದ್ದ ಶ್ರೇಣಿಕರಣ ಪಟ್ಟಿಯ ಆಧಾರದ ಮೇಲೆ ಜೇಷ್ಠತೆಯನ್ನು ಪರಿಗಣಿಸತಕ್ಕದ್ದು ಮತ್ತು ಅದರಲ್ಲಿ ಹಿರಿಯನಾದವನಿಗೆ ಕೌನ್ಸಲಿಂಗ್‌ನಲ್ಲಿ ಮೊದಲ ಆದ್ಯತೆಯನ್ನು ನೀಡತಕ್ಕದ್ದು.

(ಡಿ) ಸಕ್ಷಮ ಪ್ರಾಧಿಕಾರವು, ಮೇಲೆ ಪಟ್ಟಿಮಾಡಲಾದ ಪ್ರಕ್ರಿಯೆಯ ಅನುಸಾರ ತಾತ್ಕಾಲಿಕ ಆದ್ಯತಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟಿನಲ್ಲಿ ಅಧಿಸೂಚನೆ ಪ್ರಕಟಣೆಯ ಹದಿನೈದು ದಿನಗಳಅವಧಿಯೊಳಗೆ

ಆಕ್ಷೇಪಣೆಗಳನ್ನು ಸಲ್ಲಿಸಲು ಅಧಿಸೂಚಿಸತಕ್ಕದ್ದು. ಬೋಧಕ ಸಿಬ್ಬಂದಿಯಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿದ ಮೇಲೆ, ಅವುಗಳನ್ನು ಸಿಂಧುತ್ವದ ಆಧಾರದ ಮೇಲೆ ಪರಿಗಣಿಸಬಹುದು ಅಥವಾ ತಿರಸ್ಕರಿಸಬಹುದು ಮತ್ತು ತರುವಾಯ ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

6. **ಕೌನ್ಸಲಿಂಗ್ ನಡೆಸುವ ಪ್ರಕ್ರಿಯೆ**.-(1) ಕೌನ್ಸಲಿಂಗ್ ಪ್ರಕ್ರಿಯೆಯನ್ನು ಆರಂಭಿಸುವುದಕ್ಕಿಂತ ಮುಂಚೆ, ಎಲ್ಲಾ ಪ್ರಾಂಶುಪಾಲರುಗಳು ಮಂಜೂರಾದ ವಿಷಯವಾರು ಹುದ್ದೆಗಳ, ವಿಷಯವಾರು ಕಾರ್ಯಭಾರದ, ಕಾರ್ಯನಿರ್ವಹಣಾ ಸಂಖ್ಯಾಬಲದ ಮತ್ತು ಖಾಲಿ ಹುದ್ದೆಗಳ ಮತ್ತು ಇತರೆ ವಿವರಗಳನ್ನು ಸಕ್ಷಮ ಪ್ರಾಧಿಕಾರದಿಂದ ನಿರ್ದಿಷ್ಟಪಡಿಸಲಾದ ಪ್ರಪತ್ರದಲ್ಲಿ ಆನ್‌ಲೈನ್ ಮಾಹಿತಿ ವ್ಯವಸ್ಥೆಯ ಮುಖಾಂತರ ಸಲ್ಲಿಸತಕ್ಕದ್ದು.

(2) ಸಾರ್ವಜನಿಕ ಸೇವೆಯ ಹಿತಾಸಕ್ತಿಯಿಂದ ಕಡ್ಡಾಯ ವರ್ಗಾವಣೆಯನ್ನು ಕೌನ್ಸಲಿಂಗ್ ಮೂಲಕ ಭರ್ತಿಮಾಡಬೇಕಾದ ಬೋಧಕ ಸಿಬ್ಬಂದಿಯ ಹುದ್ದೆಗಳನ್ನು, ಖಾಲಿ ಇರುವ ಹುದ್ದೆಗಳ ಲಭ್ಯತೆಯ ಮತ್ತು ಸಾಕಷ್ಟು ಕಾರ್ಯಭಾರದ ಮತ್ತು ಶೈಕ್ಷಣಿಕ ಅವಶ್ಯಕತೆಯ ಮತ್ತು 5ನೇ ನಿಯಮದ (ಡಿ) ಖಂಡದ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರವು ಅಧಿಸೂಚಿಸತಕ್ಕದ್ದು.

(3) 4ನೇ ನಿಯಮದ (3)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ (2),(3),(4) ಮತ್ತು (5)ನೇ ಪ್ರವರ್ಗಗಳಿಗೆ ಸೇರಿದ ಬೋಧಕ ಸಿಬ್ಬಂದಿಯ ಕೋರಿಕೆಯ ಮೇಲೆ ವರ್ಗಾವಣೆಗಾಗಿ ಅರ್ಜಿಯನ್ನು ಸಕ್ಷಮ ಪ್ರಾಧಿಕಾರವು ನಿರ್ದಿಷ್ಟಪಡಿಸಲಾದ ದಿನಾಂಕದೊಳಗೆ ಮತ್ತು ಅಂಥ ಪ್ರಪತ್ರದಲ್ಲಿ ಸಲ್ಲಿಸತಕ್ಕದ್ದು.

(4) ಕೊನೆಯ ದಿನಾಂಕದೊಳಗೆ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸತಕ್ಕದ್ದು ಮತ್ತು ವರ್ಗಾವಣೆಯ ಅರ್ಜಿಗಳಲ್ಲಿ ಒದಗಿಸಿರುವ ಮಾಹಿತಿಯು ತಪ್ಪಾಗಿದೆ ಎಂದು ಕಂಡುಬಂದಲ್ಲಿ, ಇದನ್ನು ದುರ್ನಡತೆ ಎಂದು ಪರಿಗಣಿಸತಕ್ಕದ್ದು ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ನಿಯಂತ್ರಣ, ವರ್ಗೀಕರಣ ಮತ್ತು ಅಪೀಲು) ನಿಯಮಗಳು, 1957 ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ನಡತೆ) ನಿಯಮಗಳು, 1966 ರ ಮೇರೆಗೆ ಅರ್ಜಿದಾರನ ವಿರುದ್ಧ ಸೂಕ್ತ ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು.

(5) ಬೋಧಕ ಸಿಬ್ಬಂದಿ ಅಥವಾ ಅರ್ಜಿದಾರನು, ಸಕ್ಷಮ ಪ್ರಾಧಿಕಾರದಿಂದ ಸೂಚನೆಗಳನ್ನು ಸ್ವೀಕರಿಸಿದ ಮೇಲೆ, ಬೋಧಕ

ಸಿಬ್ಬಂದಿಯು, 4ನೇ ನಿಯಮದ (5)ನೇ ಉಪ-ನಿಯಮದ ಮೇರೆಗೆ ಹಂಚಿಕೆ ಮಾಡಲಾದ ಸಮಯದೊಳಗೆ ಕೌನ್ಸಲಿಂಗ್‌ಗೆ ಹಾಜರಾಗತಕ್ಕದ್ದು ಮತ್ತು ಆ ವೇಳೆ ಪ್ರದರ್ಶಿಸಲಾದ ಯಾವುದೇ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಕೋರಿಕೆಯ ಮೇಲೆ ಕೌನ್ಸಲಿಂಗ್‌ಗಾಗಿ ಹಾಜರಾಗಲು ನಿಗದಿಯಾಗಿರುವಂಥ ಬೋಧಕ ಸಿಬ್ಬಂದಿ ಅಥವಾ ಅರ್ಜಿದಾರನು, ಕೌನ್ಸಲಿಂಗ್‌ಗೆ ಹಾಜರಾಗಲು ವಿಫಲನಾದ ಪಕ್ಷದಲ್ಲಿ ಅಥವಾ ಕೌನ್ಸಿಲಿಂಗ್‌ಗೆ ಹಾಜರಾಗಿದ್ದು ಮತ್ತು ನಿಗದಿಪಡಿಸಿದ ಕಾಲಮಿತಿಯೊಳಗೆ ಒಂದು ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ವಿಫಲರಾದ ಪಕ್ಷದಲ್ಲಿ, ಕೌನ್ಸಲಿಂಗ್‌ನ ಮೂಲಕ ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಅನ್ಯಥಾ ಕಡ್ಡಾಯ ವರ್ಗಾವಣೆ ಮಾಡಿದ ಹೊರತು, ಆತನು ಪ್ರಸ್ತುತ ಕಾರ್ಯನಿರ್ವಹಿಸುವ ಸ್ಥಳದಲ್ಲಿ ಮುಂದುವರಿಯಬೇಕೆಂದು ಭಾವಿಸತಕ್ಕದ್ದು.

ಪರಂತು, ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕಡ್ಡಾಯ ವರ್ಗಾವಣೆಯ ಕೌನ್ಸಲಿಂಗ್‌ಗೆ ಹಾಜರಾಗಲು ನಿಗದಿಪಡಿಸಿರುವಂಥ ಬೋಧಕ ಸಿಬ್ಬಂದಿಯು ಕೌನ್ಸಲಿಂಗ್‌ಗೆ ಹಾಜರಾಗಲು ವಿಫಲರಾದ ಪಕ್ಷದಲ್ಲಿ ಅಥವಾ ಕೌನ್ಸಲಿಂಗ್‌ಗೆ ಹಾಜರಾಗಿದ್ದು, ನಿಗದಿಪಡಿಸಿದ ಕಾಲಮಿತಿಯೊಳಗೆ ಒಂದು ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾದ ಪಕ್ಷದಲ್ಲಿ, ಆಗ ಸಕ್ಷಮ ಪ್ರಾಧಿಕಾರವು ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕಡ್ಡಾಯ ವರ್ಗಾವಣೆಯ ಕೌನ್ಸಲಿಂಗ್‌ನ ಕೊನೆಯಲ್ಲಿ ಪ್ರದರ್ಶಿಸಲಾಗುವ ಖಾಲಿಹುದ್ದೆಗೆ ಸದರಿ ಸಿಬ್ಬಂದಿಯನ್ನು ವರ್ಗಾವಣೆ ಮಾಡುವ ಮತ್ತು ಸ್ಥಳ ನಿಯುಕ್ತಿ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

ಮತ್ತೂ ಪರಂತು, ಬೋಧಕ ಸಿಬ್ಬಂದಿಯು ವರ್ಗಾವಣೆಯ ಮೂಲಕ ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ, ಅದನ್ನು ದುರ್ನಡತೆ ಎಂದು ಪರಿಗಣಿಸತಕ್ಕದ್ದು ಮತ್ತು ಸದರಿ ಸಿಬ್ಬಂದಿಯ ವಿರುದ್ಧ ಕರ್ನಾಟಕ ಸಿವಿಲ್ ಸೇವೆಗಳ (ನಿಯಂತ್ರಣ, ವರ್ಗೀಕರಣ ಮತ್ತು ಅಪೀಲುಗಳು) ನಿಯಮಗಳು, 1957 ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ನಡತೆ) ನಿಯಮಗಳು, 1966ರ ಮೇರೆಗೆ ಸೂಕ್ತ ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು.

(6) ಕೌನ್ಸಲಿಂಗ್ ಮೂಲಕ ಭರ್ತಿಮಾಡಬೇಕಾದ 6ನೇ ನಿಯಮದ (2)ನೇ ಉಪ-ನಿಯಮದಲ್ಲಿ ಅಧಿಸೂಚಿಸಲಾದಂತೆ ಪ್ರದರ್ಶಿಸಲಾದ ಬೋಧಕ ಸಿಬ್ಬಂದಿಯ ಹುದ್ದೆಗಳು, 4ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಮತ್ತು ಕೌನ್ಸಿಲಿಂಗ್ ಮೂಲಕ 4ನೇ

ನಿಯಮದ (3)ನೇ ಉಪ-ನಿಯಮದಲ್ಲಿ ನಿಯಮಿಸಲಾದ ಮಿತಿಗಳೊಳಗೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯ ಕಡ್ಡಾಯ ವರ್ಗಾವಣೆಯ ಮೂಲಕ ಸೃಜಿಸಲಾಗುವ ಖಾಲಿ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು. ಈ ಅಧಿಸೂಚಿತ ಮತ್ತು ಪ್ರದರ್ಶಿಸಲಾದ ಹುದ್ದೆಗಳಿಗೆ ಪ್ರತಿಯಾಗಿ 4ನೇ ನಿಯಮದ (3)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ 2, 3, 4 ಮತ್ತು 5 ರ ಪ್ರವರ್ಗಗಳಿಗೆ ಸಂಬಂಧಿಸಿದ ಬೋಧಕ ಸಿಬ್ಬಂದಿಗೆ ಕೌನ್ಸಲಿಂಗ್ ಮೂಲಕ ಪ್ರದರ್ಶಿಸಲಾದ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲು ಅನುಮತಿಸತಕ್ಕದ್ದು. ಸದರಿ ಬೋಧಕ ಸಿಬ್ಬಂದಿಯು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಮುಂದುವರೆಯುವುದನ್ನು ಆಯ್ಕೆಮಾಡಿಕೊಂಡಿದ್ದಲ್ಲಿ, ಕೌನ್ಸಲಿಂಗ್‌ನ ಮೂಲಕ ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಆತನನ್ನು ಕಡ್ಡಾಯ ವರ್ಗಾವಣೆ ಮಾಡಿದ ಹೊರತು, ಅವನು ಸದರಿ ಸ್ಥಳದಲ್ಲಿ ಮುಂದುವರಿಯತಕ್ಕದ್ದು. ಮುಂದುವರೆದು, ಕೌನ್ಸಲಿಂಗ್ ಮೂಲಕ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಅಥವಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಅಥವಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಬೋಧಕ ಸಿಬ್ಬಂದಿಯು, ಪ್ರದರ್ಶಿಸಲಾದ ಹುದ್ದೆಯನ್ನು ಆಯ್ಕೆ ಮಾಡಿಕೊಂಡ ಮೇಲೆ, ಸದರಿ ಹುದ್ದೆಯನ್ನು ಮುಂದಿನ ಕೌನ್ಸಲಿಂಗ್‌ಗಾಗಿ ಪ್ರದರ್ಶಿಸಲಾಗುವ ಹುದ್ದೆಗಳ ಪಟ್ಟಿಯಿಂದ ತೆಗೆದುಹಾಕತಕ್ಕದ್ದು.

(7) 4ನೇ ನಿಯಮದ (3)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ (2),(3),(4) ಮತ್ತು (5)ರ ಪ್ರವರ್ಗಗಳಿಗೆ ಸಂಬಂಧಿಸಿದ ಬೋಧಕ ಸಿಬ್ಬಂದಿಯ ಮೊದಲನೇ ಸುತ್ತಿನ ಕೌನ್ಸಲಿಂಗ್ ಪೂರ್ಣಗೊಂಡ ತರುವಾಯ, ಮುಂದಿನ ಕೌನ್ಸಲಿಂಗ್ ಮೂಲಕ ಭರ್ತಿಮಾಡಬೇಕಾದ ಬೋಧಕ ಸಿಬ್ಬಂದಿಯ ಹುದ್ದೆಗಳನ್ನು, ಮೊದಲನೇ ಸುತ್ತಿನ ಕೌನ್ಸಲಿಂಗ್‌ನಲ್ಲಿ ಸೃಜನೆಯಾದ ಖಾಲಿಹುದ್ದೆಗಳನ್ನು ಪರಿಗಣನೆಗೆ ತೆಗೆದುಕೊಂಡು ಮತ್ತು ಸಾಕಷ್ಟು ಕಾರ್ಯಭಾರದ ಲಭ್ಯತೆ ಮತ್ತು ಶೈಕ್ಷಣಿಕ ಅವಶ್ಯಕತೆಗಳ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರವು ಅಧಿಸೂಚಿಸತಕ್ಕದ್ದು ಮತ್ತು ಪ್ರದರ್ಶಿಸತಕ್ಕದ್ದು. ನಂತರ, 4ನೇ ನಿಯಮದ (3)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ (2), (3), (4) ಮತ್ತು (5) ರ ಪ್ರವರ್ಗಗಳಿಗೆಸಂಬಂಧಿಸಿದ ಬೋಧಕ ಸಿಬ್ಬಂದಿಗಾಗಿ ಎರಡನೇ ಸುತ್ತಿನಕೌನ್ಸಲಿಂಗ್ ಅನ್ನು ನಡೆಸತಕ್ಕದ್ದು.

(8) 4ನೇ ನಿಯಮದ (3)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ (2),(3),(4) ಮತ್ತು (5)ರ ಪ್ರವರ್ಗಗಳಿಗೆ ಸಂಬಂಧಿಸಿದ ಬೋಧಕ ಸಿಬ್ಬಂದಿಗಾಗಿ ಎರಡನೆ ಸುತ್ತಿನ ಕೌನ್ಸಲಿಂಗ್ ಪೂರ್ಣಗೊಂಡ ನಂತರ, ಮುಂದಿನ ಕೌನ್ಸಲಿಂಗ್ ಮೂಲಕ ಭರ್ತಿಮಾಡಬೇಕಾದ ಬೋಧಕ ಸಿಬ್ಬಂದಿಯ ಹುದ್ದೆಗಳನ್ನು, ಮೊದಲ ಎರಡನೇ ಸುತ್ತಿನ ಕೌನ್ಸಲಿಂಗ್‌ನಲ್ಲಿ ಸೃಜನೆಯಾದ ಖಾಲಿಹುದ್ದೆಗಳ ಆಧಾರದ ಮೇಲೆ ಮತ್ತು ಸಾಕಷ್ಟು ಕಾರ್ಯಭಾರದ ಲಭ್ಯತೆಯ ಮತ್ತು ಶೈಕ್ಷಣಿಕ ಅವಶ್ಯಕತೆಗಳ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರವು ಅಧಿಸೂಚಿಸತಕ್ಕದ್ದು ಮತ್ತು ಪ್ರದರ್ಶಿಸತ್ಕಕದ್ದು. ತದನಂತರ, ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕಡ್ಡಾಯ ವರ್ಗಾವಣೆ ಮಾಡಬೇಕಾದ ಬೋಧಕ ಸಿಬ್ಬಂದಿಗಾಗಿ ಕೌನ್ಸಲಿಂಗ್ ಅನ್ನು ನಡೆಸತಕ್ಕದ್ದು. ಮುಂದುವರೆದು, ಕೌನ್ಸಲಿಂಗ್ ಮೂಲಕ ಸರ್ಕಾರಿ ಇಂಜಿನಿಯರಿಂಗ್ ಅಥವಾ ಸರ್ಕಾರಿ ಪಾಲಿಟೆಕ್ನಿಕ್ ಅಥವಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಬೋಧಕ ಸಿಬ್ಬಂದಿಯು, ಪ್ರದರ್ಶಿಸಲಾದ ಹುದ್ದೆಯನ್ನು ಆಯ್ಕೆ ಮಾಡಿಕೊಂಡ ಮೇಲೆ, ಸದರಿ ಹುದ್ದೆಯನ್ನು ಮುಂದಿನ ಕೌನ್ಸಲಿಂಗ್‌ಗಾಗಿ ಪ್ರದರ್ಶಿಸಲಾಗುವ ಹುದ್ದೆಗಳ ಪಟ್ಟಿಯಿಂದ ತೆಗೆದು ಹಾಕತಕ್ಕದ್ದು.

7. **ಆದೇಶಗಳನ್ನು ನೀಡುವುದು**.- ಸಕ್ಷಮ ಪ್ರಾಧಿಕಾರವು, ಕೌನ್ಸಲಿಂಗ್‌ನಲ್ಲಿ ಸಕ್ಷಮ ಪ್ರಾಧಿಕಾರದ ಮೂಲಕ ಆಯ್ಕೆ ಮಾಡಿಕೊಂಡ ಅಥವಾ ಹಂಚಿಕೆ ಮಾಡಿದ ಹುದ್ದೆಗಳಿಗೆ ಪ್ರತಿಯಾಗಿ ಬೋಧಕ ಸಿಬ್ಬಂದಿಯ ಕೋರಿಕೆಯ ಮೇರೆಗೆ ಮತ್ತು ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಮಾಡಲಾದ ವರ್ಗಾವಣೆ ಆದೇಶಗಳನ್ನು ನೀಡತಕ್ಕದ್ದು. ವರ್ಗಾವಣೆ ಆದೇಶದ ಪ್ರತಿಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

8. **ವರ್ಗಾವಣೆ ಅವಧಿ**.-ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದಾಗಲಿ ಅಥವಾ ಕೋರಿಕೆಯ ಮೇಲೆಯಾಗಲಿ ಮಾಡಿರುವ ಎಲ್ಲಾ ವರ್ಗಾವಣೆಗಳನ್ನು ಆ ಕ್ಯಾಲೆಂಡರ್ ವರ್ಷದಲ್ಲಿ ಮೇ ಮತ್ತು ಜುಲೈ ತಿಂಗಳ ನಡುವೆ ಅಥವಾ ಸರ್ಕಾರವು ಅಧಿಸೂಚಿಸಲಾದಂತೆ ಮಾಡಬಹುದು.

ಪರಂತು, ಮೇಲ್ಕಂಡ ವರ್ಗಾವಣೆಯ ಅವಧಿಯು 9,10 ಮತ್ತು 12ನೇ ನಿಯಮಗಳ ಅಡಿಯಲ್ಲಿ ಬರುವ ಪ್ರಕರಣಗಳಿಗೆ ಅನ್ವಯವಾಗತಕ್ಕದ್ದಲ್ಲ.

9. **ಕೌನ್ಸಲಿಂಗ್ ಮೂಲಕ ಪ್ರಾರಂಭಿಕ ನೇಮಕಾತಿ ಪ್ರಕ್ರಿಯೆ.**-(1) ಪ್ರಾರಂಭಿಕ ನೇಮಕಾತಿಗೆ ಸಂಬಂಧಿಸಿದ ಬೋಧಕ ಸಿಬ್ಬಂದಿಯನ್ನು, ಆಯ್ಕೆ ಪಟ್ಟಿಯಲ್ಲಿನ ಜೇಷ್ಠತೆಯ ಆಧಾರದ ಮೇಲೆ ವಲಯ-ಡಿ ನಲ್ಲಿ ಪ್ರದರ್ಶಿಸಲಾದ ಯಾವುದೇ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅನುಮತಿಸತಕ್ಕದ್ದು. ಆದಾಗ್ಯೂ, ನಿರ್ದಿಷ್ಟ ಮಾನದಂಡದ ಅಂಗವಿಕಲತೆಯುಳ್ಳ ವ್ಯಕ್ತಿಗಳ ಸಂದರ್ಭದಲ್ಲಿ, ಅವರಿಗೆ, ನಿರ್ದಿಷ್ಟ ಮಾನದಂಡದ ಅಂಗವಿಕಲತೆಯುಳ್ಳ ವ್ಯಕ್ತಿಗಳ ನಡುವೆಯೇ ಆಂತರಿಕ ಜೇಷ್ಠತೆ (inter-se)ಯ ಆಧಾರದ ಮೇಲೆ ಕೌನ್ಸಲಿಂಗ್‌ನಲ್ಲಿ ಆದ್ಯತೆಯನ್ನು ನೀಡತಕ್ಕದ್ದು.

ಪರಂತು, ಮೇಲ್ಕಂಡ ಷರತ್ತು, ವಲಯ-ಡಿ ನಲ್ಲಿ ಮಂಜೂರು ಮಾಡಲಾದ ಹುದ್ದೆ ಇಲ್ಲದಿದ್ದರೆ ಆ ವೃಂದಕ್ಕೆ ಅನ್ವಯವಾಗತಕ್ಕದ್ದಲ್ಲ ಮತ್ತು ಅಂತಹ ಸಂದರ್ಭಗಳಲ್ಲಿ, ಪ್ರಾರಂಭಿಕ ಸ್ಥಳ ನಿಯುಕ್ತಿಯನ್ನು ವಲಯ-ಸಿ ಗೆ ನೀಡತಕ್ಕದ್ದು. ವಲಯ-ಸಿ ಯಲ್ಲಿ ಮಂಜೂರು ಮಾಡಲಾದ ಹುದ್ದೆ ಇಲ್ಲದಿದ್ದರೆ, ನಂತರ, ಅಂತಹ ಸಂದರ್ಭಗಳಲ್ಲಿ ಪ್ರಾರಂಭಿಕ ಸ್ಥಳನಿಯುಕ್ತಿಯನ್ನು ವಲಯ-ಬಿ ಗೆ ನೀಡತಕ್ಕದ್ದು. ವಲಯ-ಬಿ ಯಲ್ಲಿ ಮಂಜೂರು ಮಾಡಲಾದ ಹುದ್ದೆ ಇಲ್ಲದಿದ್ದರೆ, ನಂತರ, ಅಂತಹ ಸಂದರ್ಭಗಳಲ್ಲಿ, ಪ್ರಾರಂಭಿಕ ಸ್ಥಳನಿಯುಕ್ತಿಯನ್ನು ವಲಯ-ಎ ಗೆ ನೀಡತಕ್ಕದ್ದು.

(2) ವಲಯ-ಡಿ ರಲ್ಲಿ ಪ್ರಾರಂಭಿಕ ನೇಮಕಾತಿಗಾಗಿ ಯಾವುದೇ ಖಾಲಿ ಹುದ್ದೆ ಲಭ್ಯವಿಲ್ಲದಿದ್ದರೆ, ಅಗತ್ಯವಿರುವ ಖಾಲಿಹುದ್ದೆಗಳನ್ನು ಈ ಕೆಳಕಂಡ ಉಪಬಂಧಗಳಿಗೊಳಪಟ್ಟು ಮತ್ತು ಅಂಥ ಕ್ರಮದಲ್ಲಿ 4, 5, 6 ಮತ್ತು 7ನೇ ನಿಯಮಗಳ ಪ್ರಕಾರ, ಬೋಧಕ ಸಿಬ್ಬಂದಿಗಳನ್ನು ವರ್ಗಾವಣೆ ಮಾಡುವ ಮೂಲಕ ಸೃಜಿಸಬಹುದು;

(ಎ) ವಲಯ-ಡಿ ನಲ್ಲಿ ಅಗತ್ಯವಿರುವಷ್ಟು ಸಂಖ್ಯೆಯ ಖಾಲಿಹುದ್ದೆಗಳನ್ನು ಸೃಜಿಸುವ ಸಲುವಾಗಿ, 4ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ವರ್ಗಾವಣೆಗಾಗಿ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯನ್ನು ಪರಿಗಣಿಸಬಹುದು ಮತ್ತು ಅಂತಹ ಅರ್ಹ ಬೋಧಕ ಸಿಬ್ಬಂದಿಯು ಲಭ್ಯವಿಲ್ಲದಿದ್ದರೆ, ತರುವಾಯ ವಲಯ-ಡಿ ನಲ್ಲಿ 4ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ವರ್ಗಾವಣೆಗಾಗಿ ಕನಿಷ್ಠ ಸೇವಾವಧಿಗಿಂತ

ಕಡಿಮೆ ಗರಿಷ್ಠ ಸಂಖ್ಯೆಯ ವರ್ಷಗಳನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಗೆ ವಲಯ-ಸಿ ನಲ್ಲಿ ಪ್ರದರ್ಶಿಸಲಾದ ಯಾವುದೇ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅನುಮತಿ ನೀಡತಕ್ಕದ್ದು.

(ಬಿ) ವಲಯ-ಡಿ ಯಿಂದ ವರ್ಗಾವಣೆಯಾದ ಬೋಧಕ ಸಿಬ್ಬಂದಿಗೆ ಸ್ಥಳಾವಕಾಶ ಕಲ್ಪಿಸುವುದಕ್ಕೆ ವಲಯ-ಸಿ ರಲ್ಲಿ ಯಾವುದೇ ಖಾಲಿಹುದ್ದೆಗಳು ಲಭ್ಯವಿಲ್ಲದಿದ್ದರೆ, ತರುವಾಯ 4ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ವರ್ಗಾವಣೆಗಾಗಿ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯನ್ನು ಪರಿಗಣಿಸಬಹುದು. ಅರ್ಹ ಬೋಧಕ ಸಿಬ್ಬಂದಿಯು ಲಭ್ಯವಿಲ್ಲದಿದ್ದರೆ, ವಲಯ-ಸಿ ರಲ್ಲಿ 4ನೇ ನಿಯಮದ (1)ನೇ ಉಪನಿಯಮದಲ್ಲಿ ನಿಯಮಿಸಲಾದಂತೆ ವರ್ಗಾವಣೆಗಾಗಿ ಕನಿಷ್ಠ ಸೇವಾವಧಿಗಿಂತ ಕಡಿಮೆ ಗರಿಷ್ಠ ಸಂಖ್ಯೆಯ ವರ್ಷಗಳನ್ನು ಪೂರ್ಣಗೊಳಿಸಿರುವವರಿಗೆ ವಲಯ-ಬಿ ರಲ್ಲಿ ಪ್ರದರ್ಶಿಸಲಾದ ಯಾವುದೇ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅನುಮತಿ ನೀಡತಕ್ಕದ್ದು.

(ಸಿ) ವಲಯ-ಸಿ ಯಿಂದ ವರ್ಗಾವಣೆಯಾದ ಬೋಧಕ ಸಿಬ್ಬಂದಿಗೆ ಸ್ಥಳಾವಕಾಶ ಕಲ್ಪಿಸಲು ವಲಯ-ಬಿ ರಲ್ಲಿ ಖಾಲಿಹುದ್ದೆಗಳು ಲಭ್ಯವಿಲ್ಲದಿದ್ದರೆ, ತರುವಾಯ 4ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ವರ್ಗಾವಣೆಗಾಗಿ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯನ್ನು ಪರಿಗಣಿಸಬಹುದು. ಅಂತಹ ಅರ್ಹ ಬೋಧಕ ಸಿಬ್ಬಂದಿಯು ಲಭ್ಯವಿಲ್ಲದಿದ್ದರೆ, ವಲಯ-ಬಿ ರಲ್ಲಿ 4ನೇ ನಿಯಮದ (1)ನೇ ಉಪನಿಯಮದಲ್ಲಿ ನಿಯಮಿಸಲಾದಂತೆ ವರ್ಗಾವಣೆಗಾಗಿ ಕನಿಷ್ಠ ಸೇವಾವಧಿಗಿಂತ ಕಡಿಮೆ ಗರಿಷ್ಠ ಸಂಖ್ಯೆಯ ವರ್ಷಗಳನ್ನು ಪೂರ್ಣಗೊಳಿಸಿರುವವರಿಗೆ ವಲಯ-ಎ ಯಲ್ಲಿ ಪ್ರದರ್ಶಿಸಲಾದ ಯಾವುದೇ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅನುಮತಿ ನೀಡತಕ್ಕದ್ದು.

10. **ಶಿಸ್ತು ಕ್ರಮದ ಪ್ರಕರಣಗಳಲ್ಲಿ ವರ್ಗಾವಣೆಗಳ ನಿಯಂತ್ರಣ.**-(1) ವಲಯ-ಎ ಅಥವಾ ವಲಯ-ಬಿ ಅಥವಾ ವಲಯ-ಸಿ ಯಲ್ಲಿ ಕಾರ್ಯನಿರ್ವಹಿಸುತ್ತಿರುವಂಥ ಯಾರೇ ಬೋಧಕ ಸಿಬ್ಬಂದಿಯ

ವಿರುದ್ಧ ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ನಡತೆ) ನಿಯಮಗಳು, 1966 ರ ಅನುಸಾರ ಶಿಸ್ತು ಕ್ರಮವನ್ನು ಆರಂಭಿಸಿದ್ದರೆ ಮತ್ತು ಸದರಿ ನಿಯಮಗಳ ಅಡಿಯಲ್ಲಿ ವಿಧಿಸಲಾಗುವ ಯಾವುದೇ ದಂಡನೆಗೆ ಒಳಗಾಗಿದ್ದರೆ ಅಥವಾ ಕಾನೂನು ನ್ಯಾಯಾಲಯದಲ್ಲಿ ಯಾವುದೇ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದರೆ ಅಂಥ ಸಿಬ್ಬಂದಿಯನ್ನು ವಲಯ-ಡಿ ಗೆ ವರ್ಗಾವಣೆ ಮಾಡಬಹುದು.

(2) ವಲಯ-ಡಿ ರಲ್ಲಿ ಯಾವುದೇ ಖಾಲಿಹುದ್ದೆಗಳು ಇಲ್ಲದಿದ್ದರೆ, ಖಾಲಿಹುದ್ದೆಯನ್ನು 4ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ವರ್ಗಾವಣೆಗಾಗಿ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯ ವರ್ಗಾವಣೆ ಮಾಡುವ ಮೂಲಕ ಸೃಜಿಸಬಹುದು ಮತ್ತು ಅಂಥ ಅರ್ಹ ಬೋಧಕ ಸಿಬ್ಬಂದಿಯು ಲಭ್ಯವಿಲ್ಲದಿದ್ದರೆ, ತರುವಾಯ ವಲಯ-ಡಿ ರಲ್ಲಿ 4ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂತೆ ವರ್ಗಾವಣೆಗಾಗಿ ಕನಿಷ್ಠ ಸೇವಾವಧಿಗಿಂತ ಕಡಿಮೆ ಗರಿಷ್ಠ ಸಂಖ್ಯೆಯ ವರ್ಷಗಳನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯನ್ನು ವರ್ಗಾವಣೆಗಾಗಿ ಪರಿಗಣಿಸಬಹುದು. ವರ್ಗಾವಣೆಯ ಪ್ರಕ್ರಿಯೆಯನ್ನು 5, 6 ಮತ್ತು 7ನೇ ನಿಯಮಗಳ ಪ್ರಕಾರ ಮಾಡತಕ್ಕದ್ದು;

ಪರಂತು, ವಲಯ-ಡಿ ಯಿಂದ ವರ್ಗಾವಣೆಯಾಗತಕ್ಕಂಥ ಬೋಧಕ ಸಿಬ್ಬಂದಿಗೆ ವಲಯ-ಸಿ ರಲ್ಲಿ ಪ್ರದರ್ಶಿಸಲಾದ ಯಾವುದೇ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅನುಮತಿಸತಕ್ಕದ್ದು.

ಮತ್ತೂ ಪರಂತು, ಅಂಥ ಬೋಧಕ ಸಿಬ್ಬಂದಿಯು ವಲಯ-ಡಿ ರಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದರೆ, ಆತನನ್ನು/ಆಕೆಯನ್ನು ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ಅದೇ ವಲಯದಲ್ಲಿ ಮತ್ತೊಂದು ಸ್ಥಳಕ್ಕೆ ವರ್ಗಾವಣೆ ಮಾಡಬಹುದು, ಆದರೆ ಆತನನ್ನು/ಆಕೆಯನ್ನು ಶಿಸ್ತುಬದ್ಧ ವ್ಯವಹರಣೆಗಳು, ಕ್ರಿಮಿನಲ್ ವ್ಯವಹರಣೆ ಅಥವಾ ಸಂದರ್ಭಾನುಸಾರ ದಂಡನೆಯು ಪೂರ್ಣಗೊಳ್ಳುವವರೆಗೂ ವಲಯ-ಡಿ ಯಿಂದ ಹೊರಗೆ ವರ್ಗಾವಣೆ ಮಾಡತಕ್ಕದ್ದಲ್ಲ.

11. **ಸಕ್ಷಮ ಪ್ರಾಧಿಕಾರದ ಅಧಿಕಾರಗಳು**.-ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ಬೋಧಕ ಸಿಬ್ಬಂದಿಯನ್ನು –

(i) ದುರ್ವರ್ತನೆ ಅಥವಾ ಅನುಚಿತ ನಡವಳಿಕೆ ಅಥವಾ ಹಣಕಾಸಿನ ಅವ್ಯವಹಾರಗಳು ಅಥವಾ ಇತರ ಯಾವುದೇ ಅಶಿಸ್ತಿನಕೃತ್ಯಗಳು ಮೇಲ್ನೋಟಕ್ಕೆ ಕಂಡುಬಂದಿರುವ ಆಧಾರದ ಮೇಲೆ; ಅಥವಾ

(ii) ದೂರುಗಳು ಮತ್ತು ದುರ್ವರ್ತನೆ ಅಥವಾ ಅನುಚಿತ ನಡವಳಿಕೆ ಅಥವಾ ಹಣಕಾಸಿನ ಅವ್ಯವಹಾರಗಳು ಅಥವಾ ಇತರೆ ಯಾವುದೇ ಅಶಿಸ್ತಿನ ಕೃತ್ಯಗಳು ಮೇಲ್ನೋಟಕ್ಕೆ ಕಂಡುಬಂದಿರುವ ಆಧಾರದ ಮೇಲೆ,

- ಸಕ್ಷಮ ಪ್ರಾಧಿಕಾರವು ವಲಯ-ಡಿ ರಲ್ಲಿನ ಯಾವುದೇ ಸ್ಥಳಕ್ಕೆ ವರ್ಗಾವಣೆ ಮಾಡಬಹುದು.

12. **ಅನುಚ್ಛೇದ 371ಜೆ.**-ಅನುಚ್ಛೇದ 371ಜೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದಿಂದ ಹೊರಡಿಸಲಾದ ಎಲ್ಲಾ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

## ಅನುಸೂಚಿ

(2ನೇ ನಿಯಮದ (1)ನೇ ಉಪ-ನಿಯಮದ (1)ನೇ ಖಂಡವನ್ನು ನೋಡಿ)

| ಕ್ರಮ.ಸಂಖ್ಯೆ: | **ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ಪದನಾಮಗಳು.** |
|---|---|
| 1. | **ಪ್ರವರ್ಗ-1 ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈ ಕೆಳಕಂಡ ಎಲ್ಲಾ ಪದನಾಮಗಳನ್ನು ಒಳಗೊಂಡಿರುತ್ತದೆ**<br>(i) ಹಿರಿಯ ಪ್ರಾಧ್ಯಾಪಕರು<br>(ii) ಪ್ರಾಧ್ಯಾಪಕರು<br>(iii) ಸಹ ಪ್ರಾಧ್ಯಾಪಕರು<br>(iv)ಸಹಾಯಕ ಪ್ರಾಧ್ಯಾಪಕರು (ಶ್ರೇಣಿ-III)<br>(v) ಸಹಾಯಕ ಪ್ರಾಧ್ಯಾಪಕರು (ಶ್ರೇಣಿ-II)<br>(vi) ಸಹಾಯಕ ಪ್ರಾಧ್ಯಾಪಕರು (ಶ್ರೇಣಿ-I) |
| 2. | **ಪ್ರವರ್ಗ-2, ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈ ಕೆಳಕಂಡ ಎಲ್ಲಾ ಪದನಾಮಗಳನ್ನು ಒಳಗೊಂಡಿರುತ್ತದೆ**<br>(i) ಮುಖ್ಯಗ್ರಂಥಪಾಲಕರು/ ಉಪ ಗ್ರಂಥಪಾಲಕರು/ ಸಹಾಯಕ ಗ್ರಂಥಪಾಲಕರು/ ಕಾಲೇಜು ಗ್ರಂಥಪಾಲಕರು.<br>(ii) ಸಹಾಯಕ ಗ್ರಂಥಪಾಲಕರು (ಹಿರಿಯ ಶ್ರೇಣಿ)/ ಕಾಲೇಜು ಗ್ರಂಥಪಾಲಕರು (ಹಿರಿಯ ಶ್ರೇಣಿ).<br>(iii) ಉಪ-ಗ್ರಂಥಪಾಲಕರು/ ಸಹಾಯಕ ಗ್ರಂಥಪಾಲಕರು |

| | |
|---|---|
| | (ವಿಶೇಷ ಶ್ರೇಣಿ)/ ಕಾಲೇಜು ಗ್ರಂಥಪಾಲಕರು (ವಿಶೇಷ ಶ್ರೇಣಿ).<br>(iv) ಮುಖ್ಯಗ್ರಂಥಪಾಲಕರು/ ಉಪ-ಗ್ರಂಥಪಾಲಕರು/ ಸಹಾಯಕ ಗ್ರಂಥಪಾಲಕರು (ವಿಶೇಷ ಶ್ರೇಣಿ)/ ಕಾಲೇಜು ಗ್ರಂಥಪಾಲಕರು (ವಿಶೇಷ ಶ್ರೇಣಿ) |
| 3. | **ಪ್ರವರ್ಗ**–3 **ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈ ಕೆಳಕಂಡ ಎಲ್ಲಾ ಪದನಾಮಗಳನ್ನು ಒಳಗೊಂಡಿರುತ್ತದೆ**<br>(i) ದೈಹಿಕ ಶಿಕ್ಷಣ ಮತ್ತು ಕ್ರೀಡಾ ಉಪ-ನಿರ್ದೇಶಕರು/ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಸಹಾಯಕ ನಿರ್ದೇಶಕರು (ವಿಶೇಷ ಶ್ರೇಣಿ)/ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಕಾಲೇಜು ನಿರ್ದೇಶಕರು (ವಿಶೇಷ ಶ್ರೇಣಿ) (ಎಜಿಪಿ 9000/-)<br>(ii) ದೈಹಿಕ ಶಿಕ್ಷಣ ಮತ್ತು ಕ್ರೀಡಾ ಉಪ-ನಿರ್ದೇಶಕರು/ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಸಹಾಯಕ ನಿರ್ದೇಶಕರು (ವಿಶೇಷ ಶ್ರೇಣಿ)/ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಕಾಲೇಜು ನಿರ್ದೇಶಕರು (ವಿಶೇಷ ಶ್ರೇಣಿ) (ಎಜಿಪಿ 8000/-)<br>(iii) ದೈಹಿಕ ಶಿಕ್ಷಣ ಮತ್ತು ಕ್ರೀಡಾ ಸಹಾಯಕ ನಿರ್ದೇಶಕರು (ಹಿರಿಯ ಶ್ರೇಣಿ)/ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಕಾಲೇಜು ನಿರ್ದೇಶಕರು (ಹಿರಿಯ ಶ್ರೇಣಿ)<br>(iv) ದೈಹಿಕ ಶಿಕ್ಷಣ ಮತ್ತು ಕ್ರೀಡಾ ಸಹಾಯಕ ನಿರ್ದೇಶಕರು/ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಕಾಲೇಜು ನಿರ್ದೇಶಕರು. |
| 4. | **ಪ್ರವರ್ಗ**–4 **ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಈ ಕೆಳಕಂಡ ಎಲ್ಲಾ ಪದನಾಮಗಳನ್ನು ಒಳಗೊಂಡಿರುತ್ತದೆ**<br>(i) ಇಲಾಖಾ ಮುಖ್ಯಸ್ಥರು (ವಿಭಾಗದ ಮುಖ್ಯಸ್ಥರು)<br>(ii) ಉಪನ್ಯಾಸಕರು (ಆಯ್ಕೆ ಶ್ರೇಣಿ-II)<br>(iii) ಉಪನ್ಯಾಸಕರು (ಆಯ್ಕೆ ಶ್ರೇಣಿ-I)<br>(iv) ಉಪನ್ಯಾಸಕರು (ಹಿರಿಯ ಶ್ರೇಣಿ)<br>(v) ಉಪನ್ಯಾಸಕರು (ಎಜಿಪಿ-6000)<br>(vi) ಉಪನ್ಯಾಸಕರು (ಎಜಿಪಿ-5400)<br>(vii) ತಾಂತ್ರಿಕ ಸಹಾಯಕರು/ಹಿರಿಯ ತಾಂತ್ರಿಕ ಸಹಾಯಕರು/ಅಭಿವೃದ್ಧಿ ಅಧಿಕಾರಿ/ ಸಂಶೋಧನಾಧಿಕಾರಿ/ ಕಾರ್ಯಕ್ರಮ ಸಂಯೋಜಕ |
| 5. | **ಪ್ರವರ್ಗ**–5 **ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಈ ಕೆಳಕಂಡ ಎಲ್ಲಾ ಪದನಾಮಗಳನ್ನು ಒಳಗೊಂಡಿರುತ್ತದೆ**.<br>(i) ಉಪನ್ಯಾಸಕರು<br>(ii) ಸಹಾಯಕ ಉಪನ್ಯಾಸಕರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಜಿ ವೆಂಕಟೇಶಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ ಶಿಕ್ಷಣ)

**ಗೆ**,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಇವರಿಗೆ ವಿಶೇಷ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸಲು ಮತ್ತು ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ ಇವರಿಗೆ 200 ಪ್ರತಿಗಳನ್ನು ಮತ್ತು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ, ಅರಮನೆ ರಸ್ತೆ, ಬೆಂಗಳೂರು ಇವರಿಗೆ 100 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು**,

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ,
3. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ (ಸಂಖ್ಯೆ-ಸಿ-472/2020) ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-1), ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-1 & 2), ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಉಪಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
10. ಎಲ್ಲಾ ಜಂಟಿ ನಿರ್ದೇಶಕರುಗಳು, ತಾಂತ್ರಿಕ ಶಿಕ್ಷಣ ಇಲಾಖೆ.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ

ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

12. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು (ಕಾಲೇಜು ಮತ್ತು ತಾಂತ್ರಿಕ), ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಕಛೇರಿ ಪ್ರತಿ/ ಶಾಖಾರಕ್ಷಾ ಕಡತ

# ಕರ್ನಾಟಕ ಸರ್ಕಾರ

ಸಂಖ್ಯೆ. ಇಡಿ 137 ಡಿಟಿಇ 2020 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:18.08.2021

## ಅಧಿಸೂಚನೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣವನ್ನು ಓದಿಕೊಂಡು, 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ನಿಯಮಗಳು, 2021ರ ಕರಡನ್ನು, ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆ ಸಂಖ್ಯೆ. 506 ದಿನಾಂಕ: 30.04.2021 ರ ಭಾಗ IV-ಎ ರಲ್ಲಿ, ಅಧಿಸೂಚನೆ ಸಂಖ್ಯೆ. ಇಡಿ 137 ಡಿಟಿಇ 2020, ದಿನಾಂಕ: 30.04.2021 ರಲ್ಲಿ ಪ್ರಕಟಿಸಲಾಗಿದ್ದು, ಅಧಿಕೃತ ರಾಜ್ಯಪತ್ರದಲ್ಲಿ ಇದನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ.

ಮತ್ತು ಸದರಿ ರಾಜ್ಯಪತ್ರವನ್ನು 30.04.2021 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು ಈ ಕರಡು ನಿಯಮಗಳಿಗೆ ಸಂಬಂಧಿಸಿದಂತೆ, ಸರ್ಕಾರವು ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಗಣಿಸಿರುವುದರಿಂದ.

ಆದ್ದರಿಂದ, ಪ್ರಸ್ತುತ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 8ನೇ

ಪ್ರಕರಣವನ್ನು ಓದಿಕೊಂಡು, 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ.-

## ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ**.-(1) ಈ ನಿಯಮಗಳನ್ನು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 2**ನೇ ನಿಯಮದ ತಿದ್ದುಪಡಿ**.-ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು, 2021 (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ರ 2ನೇ ನಿಯಮದಲ್ಲಿ (1)ನೇ ಉಪ-ನಿಯಮದಲ್ಲಿನ (ಎ) ಖಂಡವನ್ನು ಬಿಟ್ಟುಬಿಡತಕ್ಕದ್ದು.

3. 4**ನೇ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 4ನೇ ನಿಯಮದಲ್ಲಿನ (1)ನೇ ಉಪ-ನಿಯಮದ ತರುವಾಯ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, (3)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ 2,3,4 ಮತ್ತು 5ರ ಪ್ರವರ್ಗಗಳಿಗೆ ಸೇರಿದ ಬೋಧಕ ಸಿಬ್ಬಂದಿಯ ಸಂದರ್ಭದಲ್ಲಿ, ವರ್ಗಾವಣೆಯ ಉದ್ದೇಶಕ್ಕಾಗಿ ಪ್ರಸ್ತುತ ನಿಯತವಾಗಿ ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಪೂರ್ಣಗೊಳಿಸಬೇಕಾದ ಕನಿಷ್ಠ ಸೇವಾವಧಿಯನ್ನು ಸಂಬಂಧಪಟ್ಟ ಬೋಧಕ ಸಿಬ್ಬಂದಿಯ ಕೋರಿಕೆಯ ಮೇರೆಗೆ ಒಂದು ವರ್ಷದವರೆಗೆ ವಿಸ್ತರಿಸಬಹುದು"

4. 5**ನೇ ನಿಯಮದ ತಿದ್ದುಪಡಿ**.-ಸದರಿ ನಿಯಮಗಳ 5ನೇ ನಿಯಮದಲ್ಲಿ,-

(೨) (ಎ) ಖಂಡಕ್ಕೆ ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) 4ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿಯಮಿಸಲಾದಂಥ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯ ಆದ್ಯತಾ ಪಟ್ಟಿಗಳನ್ನು ಮತ್ತು 4ನೇ ನಿಯಮದ (2) ನೇ ಉಪ-ನಿಯಮದ ಮೇರೆಗೆ ವರ್ಗಾವಣೆಗಾಗಿ ಕೋರಿರುವ ಬೋಧಕ ಸಿಬ್ಬಂದಿಯ ಒಂದು ಪ್ರತ್ಯೇಕವಾದ ಪಟ್ಟಿಯನ್ನು,

ಸಕ್ಷಮ ಪ್ರಾಧಿಕಾರವು, ಪ್ರಸ್ತುತ ನಿಯತವಾಗಿ ಸ್ಥಳ ನಿಯುಕ್ತಿಗೊಳಿಸಿರುವ ಸ್ಥಳದಲ್ಲಿ ಸಲ್ಲಿಸಿದ ಸೇವಾವಧಿಯ ಆಧಾರದ ಮೇಲೆ, ಅನುಸೂಚಿಯಲ್ಲಿ ನೀಡಲಾಗಿರುವಂತೆ ವಲಯವಾರು ಮತ್ತು ಪ್ರವರ್ಗವಾರು ಅರ್ಜಿಗಳನ್ನು ಆಹ್ವಾನಿಸಿದ ತರುವಾಯ ಸಿದ್ಧಪಡಿಸತಕ್ಕದ್ದು:

ಪರಂತು, ಪ್ರಸ್ತುತ ನಿಯತವಾಗಿ ಸ್ಥಳ ನಿಯುಕ್ತಿಗೊಳಿಸಿರುವ ಸ್ಥಳದಲ್ಲಿ ಇಬ್ಬರು ಅಥವಾ ಹೆಚ್ಚಿನ ಬೋಧಕ ಸಿಬ್ಬಂದಿಗಳು ಒಂದೇ ಅವಧಿಗೆ ಸೇವೆಯನ್ನು ಸಲ್ಲಿಸಿದ್ದರೆ, ಆಗ ಕಾರ್ಯನಿರ್ವಹಿಸಲಾದ ಶ್ರೇಣೀಕರಣ ಪಟ್ಟಿಯ ಪ್ರಕಾರ ಜೇಷ್ಠತೆಯನ್ನು, ಆದ್ಯತಾ ಪಟ್ಟಿಯಲ್ಲಿನ ಆಂತರಿಕ (inter-se) ಜೇಷ್ಠತೆಗಾಗಿ ಪರಿಗಣಿಸತಕ್ಕದ್ದು."

(೩) (ಸಿ)ಖಂಡ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

5. **6ನೇ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 6ನೇ ನಿಯಮದಲ್ಲಿನ (4)ನೇ ಉಪ-ನಿಯಮದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"(4ಎ) ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಮತ್ತು ಕೋರಿಕೆಯ ಮೇಲೆ ಕೌನ್ಸಲಿಂಗ್ ಮೂಲಕ ವರ್ಗಾವಣೆಯಾಗಬೇಕಾದ ಬೋಧಕ ಸಿಬ್ಬಂದಿಯ ಅಂತಿಮ ಆದ್ಯತಾಪಟ್ಟಿಗಳನ್ನು 5ನೇ ನಿಯಮದಲ್ಲಿ ನಿಯಮಿಸಲಾದ ಪ್ರಕ್ರಿಯೆಯ ಅನುಸಾರ ಪ್ರಕಟಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಜಿ ವೆಂಕಟೇಶಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ ಶಿಕ್ಷಣ)

**ಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಇವರಿಗೆ ವಿಶೇಷ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸಲು ಮತ್ತು ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ ಇವರಿಗೆ 200 ಪ್ರತಿಗಳನ್ನು ಮತ್ತು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ, ಅರಮನೆ ರಸ್ತೆ, ಬೆಂಗಳೂರು ಇವರಿಗೆ 100 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು,**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ,
3. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ (ಸಂಖ್ಯೆ-ಸಿ-472/2020) ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-1), ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-1 & 2), ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಉಪಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
10. ಎಲ್ಲಾ ಜಂಟಿ ನಿರ್ದೇಶಕರುಗಳು, ತಾಂತ್ರಿಕ ಶಿಕ್ಷಣ ಇಲಾಖೆ.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು (ಕಾಲೇಜು ಮತ್ತು ತಾಂತ್ರಿಕ), ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಕಛೇರಿ ಪ್ರತಿ/ ಶಾಖಾರಕ್ಷಾ ಕಡತ.